ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜಿಸುವ ನಿರ್ಧಾರ ಕೈ ಬಿಡುವುದು

51 (131); ಶ್ರೀ ಗೋಪಾಲಯ್ಯ .ಕೆ

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜಿಸಲು ಕಾರಣಗಳೇನು;

ಆ) ಈ ರೀತಿಯಾದ ವಿಭಜನೆ ಮಾಡುವುದರಿಂದ ಆಡಳಿತ ವೆಚ್ಚ ಹೆಚ್ಚಾಗಿ ನಾಗರೀಕರು ಹಾಗೂ ಸರ್ಕಾರದ ಮೇಲೆ ಆರ್ಥಿಕ ಹೊರೆಯಾಗುವುದು ನಿಜವಲ್ಲವೆ;

ಇ) ಒಂದೆ ನಗರಕ್ಕೆ 2–3 ಮಹಾನಗರ ಪಾಲಿಕೆಗಳನ್ನು ಸ್ಥಾಪಿಸುವುದು ಅವೈಜ್ಞಾನಿಕವಲ್ಲವೇ;

ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತವನ್ನು ಉತ್ತಮಗೊಳಿಸಲು ಪರ್ಯಾಯ ಮಾರ್ಗವನ್ನು ರೂಪಿಸಿ ವಿಭಜಿಸುವ ನಿರ್ಧಾರವನ್ನು ಕೈಬಿಡಲು ಸರ್ಕಾರ ನಿರ್ಧರಿಸುತ್ತದೆಯೇ;

ಉ) ಇದಕ್ಕಾಗಿ ನೇಮಿಸಿರುವ ಸಮಿತಿಯನ್ನು ವಿಸರ್ಜಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮುಂದಿನ ಚುನಾವಣೆಯ ಮುನ್ನ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತದ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕರಿಗೆ ಉತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ.

ಆ) ತಜ್ಞರ ಸಮಿತಿಯು ಅಂತಿಮ ವರದಿ ನೀಡಿದ ನಂತರ ಆಡಳಿತ ವೆಚ್ಚ ಹಾಗೂ ಆರ್ಥಿಕ ಹೊರೆಯ ಬಗ್ಗೆ ಸ್ಪಷ್ಟವಾಗಿ ತಿಳಿದುಬರುತ್ತದೆ.

ಇ) ಇಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಕಟ್ಟಡ ನಿರ್ಮಾಣದ ಸಾಮಾಗ್ರಿ ಹಾಗೂ ದಿನ್ಯ ನಿತ್ಯ ವಸ್ತುಗಳ ಸಾಗಾಣಿಕ ವಾಹನಗಳಿಗೆ ನಿರ್ಭಂದ ವಿಧಿಸಿರುವುದು

52 (132); ಶ್ರೀ ಗೋಪಾಲಯ್ಯ .ಕೆ (ಮಹಾಲಕ್ಷ್ಮಿ ಲೇಔಟ್)

ಅ) ನಾಗರೀಕರಿಗೆ ದಿನ ನಿತ್ಯ ಉಪಯೋಗ ಹಾಗೂ ಸಾಮಾಗ್ರಿಗಳ ಸಾಗಾಣಿಕೆ ವಾಹನಗಳು ಬೆಂಗಳೂರು ನಗರದಲ್ಲಿ ಪ್ರತಿದಿನ ಬೆಳಿಗ್ಗೆ 8 ರಿಂದ 11 ಘಂಟೆ ಹಾಗೂ ಸಂಜೆ 4 ರಿಂದ 8 ಘಂಟೆಯವರೆಗೆ ಸಂಚರಿಸಲು ನಿರ್ಬಂಧ ವಿಧಿಸಲಾಗಿದೆಯೇ.

ಆ) ಹಾಗಿದ್ದಲ್ಲಿ, ನಗರದಲ್ಲಿ ಜನ ಸಾಮಾನ್ಯರಿಗೆ ಹಾಗು ಕಟ್ಟಡ ನಿರ್ಮಾಣ ಕಾರ್ಯಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಈ ಸರಕು ಸಾಗಾಣಿಕೆ ವಾಹನಗಳಿಗೆ ವಿಧಿಸಿರುವ ನಿರ್ಬಂಧವನ್ನು ಸರ್ಕಾರ ರದ್ದುಗೊಳಿಸುವುದೇ

ಈ) ಪ್ರಸಕ್ತ ಲಾರಿ ಸಾಗಾಣಿಕೆ ವಾಹನಗಳ ನಿರ್ಬಂಧದಿಂದ ನಿಲುಗಡೆಯಾಗುವ ವಾಹನಗಳಿಗೆ ತಂಗುದಾಣದ ವ್ಯವಸ್ಥೆ ಮಾಡಲಾಗಿದೆಯೇ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಬೆಂಗಳೂರು ನಗರದ ಎಲ್ಲಾ ರಸ್ತೆಗಳಲ್ಲಿ ಸರಕು ಸಾಗಣೆ ವಾಹನಗಳು ಬೆಳಿಗ್ಗೆ 11–00 ಗಂಟೆಯಿಂದ ಸಂಜೆ 04–00 ಗಂಟೆಯವರೆಗೆ ಹಾಗೂ ರಾತ್ರಿ 10–00 ಗಂಟೆಯಿಂದ ಬೆಳಿಗ್ಗೆ 07–00 ಗಂಟೆಯವರೆಗೆ ಸಂಚರಿಸುವಂತೆ ಹಾಗೂ ಬೆಳಿಗ್ಗೆ 07–00 ಗಂಟೆಯಿಂದ 11–00 ಗಂಟೆಯವರೆಗೆ ಹಾಗೂ ಸಂಜೆ 04–00 ಗಂಟೆಯಿಂದ ರಾತ್ರಿ 10–00